ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 :** **ಏಪ್ರಿಲ್ 24, 2020**

# ಪತ್ರಿಕಾ ಆಮಂತ್ರಣ

**1) ಬೆಂಗಳೂರಿನ ನಾಗರಭಾವಿ ಮತ್ತು ನಾಯಂಡಹಳ್ಳಿಯ ಬಡ ಕೂಲಿ ಕಾರ್ಮಿಕರಿಗೆ ಆಹಾರ ಸಾಮಗ್ರಿಗಳ ಕಿಟ್ ವಿತರಣೆ :**

**ವಿ. ಸೋಮಣ್ಣ, ವಸತಿ ಸಚಿವರು.**

**ದಿನಾಂಕ: 25–04–2020, ಶನಿವಾರ, ಸಮಯ : ಬೆಳಿಗ್ಗೆ 7–00 ಗಂಟೆಗೆ**
**ಸ್ಥಳ : ವಾರ್ಡ್ ನಂ. 128, ವಾರ್ಡ್ ಕಚೇರಿ, ಸಿದ್ಧಗಂಗಾ ಶಾಲೆ ರಸ್ತೆ, ಚಂದ್ರಾ ಲೇಔಟ್, ಪಾಲಿಕೆ ಸೌಧ, ಬೆಂಗಳೂರು**

**2) ಪತ್ರಿಕಾಗೋಷ್ಠಿ :**

**ಆರೋಗ್ಯ ಸಚಿವ ಶ್ರೀರಾಮುಲು ಮತ್ತು ವೈದ್ಯಕೀಯ ಶಿಕ್ಷಣ ಡಾ: ಕೆ. ಸುಧಾಕರ್**

**ದಿನಾಂಕ : 25–04–2020, ಶನಿವಾರ, ಸಮಯ : ಅಪರಾಹ್ನ 12–00 ಗಂಟೆಗೆ**
**ಸ್ಥಳ : 313, ಸಮಿತಿ ಕೊಠಡಿ, ಮೂರನೇ ಮಹಡಿ, ವಿಧಾನ ಸೌಧ, ಬೆಂಗಳೂರು**

**3) ಬೆಂಗಳೂರಿನ ಮೂಡಲಪಾಳ್ಯ ವಾರ್ಡ್ ವ್ಯಾಪ್ತಿಯ ಬಡ ಕೂಲಿ ಕಾರ್ಮಿಕರಿಗೆ ಆಹಾರ ಸಾಮಗ್ರಿಗಳ ಕಿಟ್ ವಿತರಣೆ :**

**ವಿ. ಸೋಮಣ್ಣ, ವಸತಿ ಸಚಿವರು.**

**ದಿನಾಂಕ: 26–04–2020 ಭಾನುವಾರ ಸಮಯ : ಬೆಳಿಗ್ಗೆ 10–00 ಗಂಟೆಗೆ**
**ಸ್ಥಳ : ವಾರ್ಡ್ ನಂ. 127, ವಿವೇಕಾನಂದ ಪಾರ್ಕ್ ಕಲ್ಯಾಣ ನಗರ, ಬೆಂಗಳೂರು –72**

4) ಮಾರುತಿ ಮಂದಿರ ವಾರ್ಡ್ ವ್ಯಾಪ್ತಿಯ ಬಡ ಕೂಲಿ ಕಾರ್ಮಿಕರಿಗೆ ಆಹಾರ ಸಾಮಗ್ರಿಗಳ ಕಿಟ್ ವಿತರಣೆ :

ವಿ. ಸೋಮಣ್ಣ, ವಸತಿ ಸಚಿವರು.

ದಿನಾಂಕ: 27-04-2020 ಸೋಮವಾರ ಸಮಯ : ಬೆಳಿಗ್ಗೆ 9-00 ಗಂಟೆಗೆ
ಸ್ಥಳ : ಡಾ : ಶಿವಕುಮಾರ್ ಸ್ವಾಮೀಜಿ ಸೇವಾ ಸಂಕೀರ್ಣ (ವಾರ್ಡ್ ಕಚೇರಿ) ವಿನಾಯಕ ಲೇಔಟ್ ಬೆಂಗಳೂರು

## ಪತ್ರಿಕಾ ಪ್ರಕಟಣೆ

## ಡಾ: ರಾಜ್‌ಕುಮಾರ್ ಜಯಂತಿ ಸರಳ ಆಚರಣೆ

ಬೆಂಗಳೂರು, ಏಪ್ರಿಲ್ 24 ( ಕರ್ನಾಟಕ ವಾರ್ತೆ ) :

ಡಾ. ರಾಜಕುಮಾರ್ ಅವರು ಕನ್ನಡದ ಸಾಂಸ್ಕೃತಿಕ ಪ್ರತಿನಿಧಿ, ಈ ಕೋವಿಡ್ ಲಾಕ್‌ಡೌನ್ ಸಮಯದಲ್ಲೂ ಸಹ ಅವರ ಜಯಂತಿ ನೆನಪು ಜನ-ಮನಗಳಲ್ಲಿ ಚೈತನ್ಯವನ್ನು ತುಂಬಿದೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷರಾದ ಸುನೀಲ್ ಪುರಾಣಿಕ್ ಹೇಳಿದರು.

ಕೋವಿಡ್ -19 ಲಾಕ್‌ಡೌನ್ ಹಿನ್ನೆಲೆಯಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕೇಂದ್ರ ಕಚೇರಿ ವಾರ್ತಾ ಸೌಧದಲ್ಲಿ ಇಂದು ಹಮ್ಮಿಕೊಂಡಿದ್ದ ಕನ್ನಡದ ವರನಟ ಡಾ: ರಾಜ್‌ಕುಮಾರ್ ಅವರ 92 ನೇ ಜಯಂತಿಯ ಸರಳ ಕಾರ್ಯಕ್ರಮದಲ್ಲಿ ಡಾ.ರಾಜ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ನಂತರ ಮಾತನಾಡಿದ ಅವರು ಪ್ರತಿಯೊಬ್ಬರಲ್ಲೂ ಒಂದೇ ತೆರನಾಗಿ ಕಾಣುವ ವ್ಯಕ್ತಿತ್ವ ಡಾ: ರಾಜ್‌ಕುಮಾರ್ ಅವರದ್ದು ಎಂದು ಅವರ ಒಡನಾಟವನ್ನು ಸ್ಮರಿಸಿಕೊಂಡರು.

ಕರ್ನಾಟಕವನ್ನು ಪ್ರತಿನಿಧಿಸುವ ಏಕೈಕ ಕಲಾವಿದರೆಂದರೆ ಅದು ರಾಜ್‌ಕುಮಾರ್ ಮಾತ್ರ, ಅವರ ಪ್ರತಿ ನಡೆ-ನುಡಿ ಇತರರಿಗೆ ಮಾರ್ಗದರ್ಶನವಾಗಿತ್ತು. ಅವರು ಕೇವಲ ಒಬ್ಬ ಕಲಾವಿದರಲ್ಲದೆ ಅತ್ಯುತ್ತಮ ಮಾನವೀಯ ಅಂತಃಕರಣವುಳ್ಳ ಮಹಾನ್ ಮಾನವತವಾದಿಯಾಗಿದ್ದು ಎಂದು ಹೇಳಿದರು.

ಹಿರಿಯ ನಿರ್ಮಾಪಕ ಹಾಗೂ ಮಂಡಳಿಯ ಮಾಜಿ ಅಧ್ಯಕ್ಷ ಸಾ.ರಾ. ಗೋವಿಂದು ಅವರು ಮಾತನಾಡಿ ಸೂರ್ಯಚಂದ್ರ ಎಲ್ಲಿಯವರೆಗೆ ಇರುತ್ತೋ ಅಲ್ಲಿಯವರೆಗೆ ಡಾ: ರಾಜ್‌ಕುಮಾರ್ ಅವರ ಹೆಸರು ಅಜರಾಮರ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯನ್ನು ತುಂಬಾ ಪ್ರೀತಿಸುತ್ತಿದ್ದರು. ಯಾವುದೇ ಸಮಸ್ಯೆಗಳಿದ್ದರೂ ನಾವು ಅವರಲ್ಲಿ ತೆರಳಿ ಪರಿಹಾರ ಹುಡುಕಿಕೊಳ್ಳುತ್ತಿದ್ದೇವು ಎಂದು ಹೇಳಿದರು.

ಈ ಸಮಯದಲ್ಲಿ  ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿ ಕ್ಯಾಪ್ಟನ್ ಮಣಿವಣ್ಣನ್, ಆಯುಕ್ತ ಎಸ್.ಎನ್. ಸಿದ್ದರಾಮಪ್ಪ, ಜಂಟಿ ನಿರ್ದೇಶಕರಾದ ಎ.ಆರ್. ಪ್ರಕಾಶ್ ಹಾಗೂ ಹೆಚ್. ಬಿ. ದಿನೇಶ್, ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಜಯರಾಜ್, ಚಿತ್ರನಟಿ ಮಾಳವಿಕಾ ಅವಿನಾಶ್ ಅವರು ಸೇರಿದಂತೆ ಇಲಾಖೆಯ ಹಿರಿಯ ಅಧಿಕಾರಿ ಮತ್ತು ಸಿಬ್ಬಂದಿಗಳು ಉಪಸ್ಥಿತರಿದ್ದರು.

ಛಾಯಾಚಿತ್ರ ಲಗತ್ತಿಸಿದೆ. )

## ವಸತಿ ಸಚಿವರಿಂದ ಆಹಾರ ಸಾಮಗ್ರಿಗಳ ಕಿಟ್ ವಿತರಣೆ

ಬೆಂಗಳೂರು, ಏಪ್ರಿಲ್ 24 ( ಕರ್ನಾಟಕ ವಾರ್ತೆ ) :

ವಸತಿ ಸಚಿವ  ವಿ. ಸೋಮಣ್ಣ ಅವರು ಗೋವಿಂದರಾಜ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಏಪ್ರಿಲ್ 25 ರಂದು ಬೆಳಿಗ್ಗೆ 7-00 ಗಂಟೆಗೆ  ನಾಗರಭಾವಿ ಮತ್ತು ನಾಯಂಡಹಳ್ಳಿಯ ಬಡ ಕೂಲಿ ಕಾರ್ಮಿಕರಿಗೆ ವಾರ್ಡ್ ನಂ. 128, ವಾರ್ಡ್ ಕಚೇರಿ, ಸಿದ್ಧಗಂಗಾ ಶಾಲೆ ರಸ್ತೆ, ಚಂದ್ರಾ ಲೇಔಟ್, ಪಾಲಿಕೆ ಸೌಧ, ಇಲ್ಲಿ ಆಹಾರ ಸಾಮಗ್ರಿಗಳ ಕಿಟ್‌ನ್ನು ವಿತರಿಸುವರು.

ಏಪ್ರಿಲ್ 26 ರಂದು ಬೆಂಗಳೂರಿನ ಮೂಡಲಪಾಳ್ಯ ವಾರ್ಡ್ ವ್ಯಾಪ್ತಿಯ ಬಡ ಕೂಲಿ ಕಾರ್ಮಿಕರಿಗೆ ಆಹಾರ ಸಾಮಗ್ರಿಗಳ ಕಿಟ್‌ನ್ನು  ಬೆಳಿಗ್ಗೆ 10-00 ಗಂಟೆಗೆ  ವಾರ್ಡ್ ನಂ. 127, ವಿವೇಕಾನಂದ ಪಾರ್ಕ್ ಕಲ್ಯಾಣ ನಗರ, ಬೆಂಗಳೂರು -72 ಇಲ್ಲಿ ಆಹಾರ ಕಿಟ್ ವಿತರಿಸುವರು.

ಏಪ್ರಿಲ್ 27 ರಂದು ಮಾರುತಿ ಮಂದಿರ ವಾರ್ಡ್ ವ್ಯಾಪ್ತಿಯ ಬಡ ಕೂಲಿ ಕಾರ್ಮಿಕರಿಗೆ ಆಹಾರ ಸಾಮಗ್ರಿಗಳ ಕಿಟ್‌ನ್ನು  ಬೆಳಿಗ್ಗೆ 9-00 ಗಂಟೆಗೆ  ಡಾ : ಶಿವಕುಮಾರ್ ಸ್ವಾಮೀಜಿ ಸೇವಾ ಸಂಕೀರ್ಣ (ವಾರ್ಡ್ ಕಚೇರಿ) ವಿನಾಯಕ ಲೇಔಟ್ ಬೆಂಗಳೂರು ಇಲ್ಲಿ ವಿತರಿಸುವರು ಎಂದು ಪ್ರಕಟಣೆ ತಿಳಿಸಿದೆ.

## ಕನಿಷ್ಠ ಬೆಂಬಲ ಬೆಲೆಯಲ್ಲಿ ಭತ್ತ, ರಾಗಿ, ಬಿಳಿ ಜೋಳ (ಹೈಬ್ರಿಡ್ ಜೋಳ) ವನ್ನು ಖರೀದಿಸುವ ಅವಧಿ ವಿಸ್ತರಣೆ.

ಕೋವಿಡ್ – 19 (ನೊವೆಲ್ ಕೊರೊನಾ ವೈರಸ್) ಹರಡುವಿಕೆಯನ್ನು ತಡೆಗಟ್ಟುವ ಬಗ್ಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರವು ಲಾಕ್‌ಡೌನ್‌ಅನ್ನು ತಾತ್ಕಾಲಿಕವಾಗಿ ಕೃಷಿ ಕ್ಷೇತ್ರಕ್ಕೆ ಸಡಿಲಗೊಳಿಸಿದ್ದು, ರೈತರು ತಾವು ಬೆಳೆದ ಭತ್ತ, ರಾಗಿ ಮತ್ತು ಬಿಳಿ ಜೋಳ (ಹೈಬ್ರಿಡ್ ಜೋಳ) ವನ್ನು ತಮ್ಮ ಹತ್ತಿರದ ಖರೀದಿ ಕೇಂದ್ರಗಳಲ್ಲಿ

ಬೆಂಬಲ ಬೆಲೆಯಲ್ಲಿ ಮಾರಾಟ ಮಾಡಲು ಅವಕಾಶ ಮಾಡಲಾಗಿದೆ ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷರಾದ ಹನುಮನಗೌಡ ಬೆಳಗುರ್ಕಿಯವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

**ಭತ್ತ:-**

**ಕೇಂದ್ರ ಸರ್ಕಾರವು ಭತ್ತಕ್ಕೆ ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ನಿಗದಿಪಡಿಸಿದ ಗರಿಷ್ಠ ಮಿತಿಯನ್ನು 2.00 ಲಕ್ಷ ಟನ್ ಭತ್ತ ಖರೀದಿಸಲು ಅನುಮತಿಸಿದ್ದು, ದಿನಾಂಕ: 21.04.2020ರವರೆಗೆ ಕೇವಲ 51,000 ಟನ್ ಭತ್ತ ಮಾತ್ರ ಖರೀದಿಸಲಾಗಿದೆ. ದಿನಾಂಕ: 01.05.2020ರವರೆಗೆ ರೈತರು ನೊಂದಾಯಿಸಿಕೊಳ್ಳಲು ಕಾಲಾವಕಾಶ ವಿಸ್ತರಿಸಲಾಗಿದ್ದು, ದಿನಾಂಕ: 15.05.2020ರ ವರೆಗೆ ರೈತರಿಂದ ಭತ್ತವನ್ನು ಖರೀದಿಸಲು ಮುಂದುವರೆಸಿದೆ. ಈಂಕಿ ಗುಣಮಟ್ಟದ ಗ್ರೇಡ್ ಎ ಭತ್ತಕ್ಕೆ ಪ್ರತಿ ಕ್ವಿಂಟಾಲ್‌ಗೆ ರೂ.1835 ಹಾಗೂ ಸಾಮಾನ್ಯ ಪ್ರಭೇದದ ಭತ್ತಕ್ಕೆ ಪ್ರತಿ ಕ್ವಿಂಟಾಲ್ ಗೆ ರೂ.1815 ಬೆಂಬಲ ಬೆಲೆ ನಿಗದಿಪಡಿಸಿದೆ.**

ರಾಗಿ:-

**ಕೇಂದ್ರ ಸರ್ಕಾರವು ರಾಗಿಗೆ ಬೆಂಬಲ ಬೆಲೆ ಯೋಜನೆಯಡಿ ನಿಗದಿಪಡಿಸಿದ 2.00 ಲಕ್ಷ ಮೇಟ್ರಿಕ್ ಟನ್ ಗಳ ಪೈಕಿ ದಿನಾಂಕ: 21.04.2020ರ ವರೆವಿಗೆ 1.26 ಲಕ್ಷ ಟನ್‌ಗಳಷ್ಟು ಮಾತ್ರ ಖರೀದಿಯಾಗಿರುತ್ತದೆ. ರಾಗಿ ಖರೀದಿಯನ್ನು ದಿನಾಂಕ: 30.05.2020ರವರೆವಿಗೆ ವಿಸ್ತರಿಸಿದ್ದು, ಈಗಾಗಲೇ ನೊಂದಾಯಿಸಿಕೊಂಡ ರೈತರು ಗರಿಷ್ಠ 50 ಕ್ವಿಂಟಾಲ್ ರಾಗಿಯನ್ನು ಪ್ರತಿ ರೈತರಿಂದ ಖರೀದಿಸಲಾಗುತ್ತದೆ. ಈಂಕಿ ಗುಣಮಟ್ಟದ ರಾಗಿಗೆ ಪ್ರತಿ ಕ್ವಿಂಟಾಲ್ ಗೆ ರೂ.3150 ಬೆಂಬಲ ಬೆಲೆ ನಿಗದಿಪಡಿಸಿದೆ.**

## ಬಿಳಿ ಜೋಳ (ಹೈಬ್ರಿಡ್ ಜೋಳ):-

**ಕೇಂದ್ರ ಸರ್ಕಾರವು ಬಿಳಿ ಜೋಳ (ಹೈಬ್ರಿಡ್ ಜೋಳ)ವನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲು ನಿಗದಿಪಡಿಸಿದ 1241 ಮೇಟ್ರಿಕ್ ಟನ್ ಹೆಚ್ಚಿಸಿ, 2020-21ನೇ ಸಾಲಿನ ಹಿಂಗಾರು (ರಬಿ) ಹಂಗಾಮಿನ 1.00 ಲಕ್ಷ ಮೇಟ್ರಿಕ್ ಟನ್ ಬಿಳಿ ಜೋಳ (ಹೈಬ್ರಿಡ್ ಜೋಳ)ವನ್ನು ಖರೀದಿಸಲು ಅನುಮತಿಸಿದೆ. ದಿನಾಂಕ: 21.04.2020ರವರೆವಿಗೆ ಕೇವಲ 8412 ಕ್ವಿಂಟಾಲ್ ಬಿಳಿ ಜೋಳ (ಹೈಬ್ರಿಡ್ ಜೋಳ) ಮಾತ್ರ ಖರೀದಿಯಾಗಿದೆ. ದಿನಾಂಕ: 30.04.2020ರವರೆವಿಗೆ ರೈತರು ತಮ್ಮ ಹೆಸರು ನೊಂದಾಯಿಸಿಕೊಳ್ಳಲು ಅವಕಾಶವಿದ್ದು, ಪ್ರತಿ ರೈತರು ಗರಿಷ್ಠ 50 ಕ್ವಿಂಟಾಲ್ ಬಿಳಿ ಜೋಳ (ಹೈಬ್ರಿಡ್ ಜೋಳ)ವನ್ನು ಬೆಂಬಲ ಬೆಲೆಯಲ್ಲಿ**

ದಿನಾಂಕ: 31.05.2020ರವರೆವಿಗೆ ಮಾರಾಟ ಮಾಡಲು ಅವಕಾಶವಿದೆ. ಈಂಕಿ ಗುಣಮಟ್ಟದ ಬಿಳಿ ಜೋಳ (ಮಾಲ್ದಂಡಿ) ರೂ.2570 ಮತ್ತು ಬಿಳಿ ಹೈಬ್ರಿಡ್ ಜೋಳಕ್ಕೆ ರೂ.2550 ಬೆಂಬಲ ಬೆಲೆ ನಿಗದಿಪಡಿಸಿದೆ.

## ವಸತಿ ಸಚಿವರ ಪ್ರವಾಸ

**ಬೆಂಗಳೂರು, ಏಪ್ರಿಲ್ 24 ( ಕರ್ನಾಟಕ ವಾರ್ತೆ ) :**

ವಸತಿ ಸಚಿವ ವಿ. ಸೋಮಣ್ಣ ಅವರು ಏಪ್ರಿಲ್ 28 ರಂದು ಕೊಡಗು ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ಕೇಂದ್ರಸ್ಥಾನಕ್ಕೆ ಹಿಂತಿರುಗುವವರು ಎಂದು ಪ್ರಕಟಣೆ ತಿಳಿಸಿದೆ.

## ಶಿಕ್ಷಣ ಸಚಿವರ ಪ್ರವಾಸ

**ಬೆಂಗಳೂರು, ಏಪ್ರಿಲ್ 24 ( ಕರ್ನಾಟಕ ವಾರ್ತೆ ) :**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರು ಏಪ್ರಿಲ್ 25 ರಂದು ಚಾಮರಾಜನಗರ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಅಂದೇ ರಾತ್ರಿ ಕೇಂದ್ರಸ್ಥಾನಕ್ಕೆ ಹಿಂತಿರುಗುವವರು ಎಂದು ಪ್ರಕಟಣೆ ತಿಳಿಸಿದೆ.

## ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ ಬೆಂಗಳೂರು ಜಲಮಂಡಳಿಯಿಂದ 2 ಕೋಟಿ ರೂ. ದೇಣಿಗೆ

**ಬೆಂಗಳೂರು, ಏಪ್ರಿಲ್ 24 ( ಕರ್ನಾಟಕ ವಾರ್ತೆ ) :**

ರಾಜ್ಯದಲ್ಲಿ ವ್ಯಾಪಕವಾಗಿ ಹರಡುತ್ತಿರುವ “ಕೋವಿಡ್ –19” ಎಂಬ ಮಾರಕ ರೋಗದ ವಿರುದ್ಧ ಹೋರಾಡುತ್ತಿರುವ ರಾಜ್ಯ ಸರ್ಕಾರವು ಸಂತ್ರಸ್ತರಿಗೆ ಅಗತ್ಯ ಮೂಲಭೂತ ಸೌಲಭ್ಯ ಕಲ್ಪಿಸಲು ಹಾಗೂ ಕೋವಿಡ್

–19 ವಿರುದ್ಧ ಸರ್ಕಾರದ ಕಾರ್ಯಗಳಿಗೆ ನೆರವಾಗಲು ಮಂಡಳಿಯು ರೂ.2.00 ಕೋಟಿ (ಎರಡು ಕೋಟಿ ರೂಪಾಯಿಗಳು ಮಾತ್ರ) ಮೊತ್ತವನ್ನು ದೇಣಿಗೆಯಾಗಿ ತನ್ನ ಆದಾಯದಿಂದ ನೀಡಿರುತ್ತದೆ.

ಬೆಂಗಳೂರು ಜಲಮಂಡಳಿ ನೌಕರರ ಸಂಘದ ಕೋರಿಕೆಯಂತೆ ಮಂಡಳಿಯ ಅಧಿಕಾರಿ/ನೌಕರರ ವರ್ಗದವರಿಂದಲೂ ಸಹ ಕೋವಿಡ್ –19 ರ ವಿರುದ್ಧದ ಹೋರಾಟಕ್ಕೆ ಭಾಗಿಯಾಗಲು ಒಂದು ದಿನದ ವೇತನವಾದ ರೂ.40.00/–ಲಕ್ಷ (ನಲವತ್ತು ಲಕ್ಷ ರೂಪಾಯಿಗಳು ಮಾತ್ರ) ವನ್ನು ದೇಣಿಗೆಯಾಗಿ ನೀಡಲಾಗಿದೆ.

ಜಲಮಂಡಳಿಯ ಆದಾಯದಿಂದ ರೂ.2.00 ಕೋಟಿ ಹಾಗೂ ಅಧಿಕಾರಿ/ನೌಕರರ ಒಂದು ದಿನದ ವೇತನದ ಮೊತ್ತವಾದ ರೂ. 40.00 ಲಕ್ಷ ಸೇರಿ ಒಟ್ಟಾರೆಯಾಗಿ ರೂ.2.40 ಕೋಟಿ ರೂಗಳನ್ನು ಮಾನ್ಯ "ಮುಖ್ಯ ಮಂತ್ರಿಗಳ ಪರಿಹಾರ ನಿಧಿ"ಗೆ ದಿನಾಂಕ: 24.04.2020 ರಂದು ನೀಡಲಾಗಿರುತ್ತದೆ.

ಈ ಸಂದರ್ಭದಲ್ಲಿ ಬಿ.ಎ.ಬಸವರಾಜು, ಮಾನ್ಯ ನಗರಾಭಿವೃದ್ದಿ ಸಚಿವರು, ಕರ್ನಾಟಕ ಸರ್ಕಾರ, ರಾಕೇಶ್ ಸಿಂಗ್, ಭಾ.ಆ.ಸೇ. ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ಮಂಡಳಿಯ ಮಾನ್ಯ ಅಧ್ಯಕ್ಷರಾದ ತುಷಾರ್ ಗಿರಿ ನಾಥ್, ಭಾ.ಆ.ಸೇ., ರವರು, ಆರ್ಥಿಕ ಸಲಹೆಗಾರರು ಮತ್ತು ಮುಖ್ಯ ಲೆಕ್ಕಾಧಿಕಾರಿಗಳಾದ .ಎಂ.ವಿ. ಪ್ರಶಾಂತ್‌ಕುಮಾರ್, ಬಿ.ಸುರೇಶ್, ಅಪರ ಮುಖ್ಯ ಅಭಿಯಂತರರು(ತ್ಯಾನೀನಿ) ಮತ್ತು ಬೆಂಗಳೂರು ಜಲಮಂಡಳಿ ನೌಕರರ ಸಂಘದ ಅಧ್ಯಕ್ಷರಾದ ರುದ್ರೇಗೌಡ ರವರು ಉಪಸ್ಥಿತರಿದ್ದರು.

## ಅವಧಿ ವಿಸ್ತರಣೆ

**ಬೆಂಗಳೂರು, ಏಪ್ರಿಲ್ 24 ( ಕರ್ನಾಟಕ ವಾರ್ತೆ ) :**

ಕರ್ನಾಟಕ ಲೋಕಸೇವಾ ಆಯೋಗ ಕಿರಿಯ ಸಹಾಯಕರು/ದ್ವಿತೀಯ ದಜೆ ಸಹಾಯಕರ ಹುದ್ದೆಗೆ ಉಳಿಕೆ ಮೂಲ ವೃಂದದ ಮತ್ತು ಹೈದ್ರಾಬಾದ್ ಕರ್ನಾಟಕ ವೃಂದದ ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕವನ್ನು ಜೂನ್ 1, 2020 ರವರೆಗೆ ವಿಸ್ತರಿಸಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಪರೀಕ್ಷೆ ಮುಂದೂಡಿಕೆ

ಬೆಂಗಳೂರು, ಏಪ್ರಿಲ್ 24 ( ಕರ್ನಾಟಕ ವಾರ್ತೆ ) :

ಕರ್ನಾಟಕ ಲೋಕಸೇವಾ ಆಯೋಗ  ಮೇ ಮತ್ತು ಜೂನ್ ತಿಂಗಳಿನಲ್ಲಿ ನಡೆಸಲು ಉದ್ದೇಶಿಸಲಾಗಿದ್ದ ರಾಜ್ಯದ ವಿವಿಧ ಇಲಾಖೆಗಳಲ್ಲಿನ ಸಹಾಯಕರು /ಪ್ರಥಮ ದರ್ಜೆ ಸಹಾಯಕರು, ಗೆಜೆಟೆಡ್ ಪ್ರೊಬೆಷನರ್ಸ್ ಗ್ರೂಫ್ ಎ ಮತ್ತು ಬಿ ವೃಂದದ ಒಟ್ಟು 106 ಹುದ್ದೆಗಳು,  ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಇಲಾಖೆಯಲ್ಲಿನ ಸಮೂಹ ಎ ವೃಂದದ ಸಹಾಯಕ ನಿಯಂತ್ರಕರು ,  ರಾಜ್ಯದ ವಿವಿಧ ಇಲಾಖೆಗಳಲ್ಲಿನ ಕಿರಿಯ ಸಹಾಯಕರು/ದ್ವಿತೀಯ ದರ್ಜೆ ಸಹಾಯಕರು ಹುದ್ದೆಗಳ  ಪರೀಕ್ಷೆಗಳನ್ನು  ಮೂಂದೂಡಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ನೀರಿನ ಬಿಲ್ ಪಾವತಿ ಹಾಗೂ ಕಾಲರಾ ತಡೆಗಟ್ಟುವ ನಿಟ್ಟಿನಲ್ಲಿ ಬೆಂಗಳೂರು ಜಲಮಂಡಳಿ  ಕ್ರಮಗಳು

ಬೆಂಗಳೂರು, ಏಪ್ರಿಲ್ 24 ( ಕರ್ನಾಟಕ ವಾರ್ತೆ ) :

ಬೆಂಗಳೂರು ಜಲಮಂಡಳಿಯು ನೀರು ಸರಬರಾಜು ಕೊಳವೆಯಲ್ಲಿ ಸೋರುವಿಕೆಯನ್ನು ಸಾರ್ವಜನಿಕರಿಂದ ಅಥವಾ ಮಂಡಳಿಯ ಸಿಬ್ಬಂದಿಯವರು ಗುರುತಿಸಿದ ತಕ್ಷಣ ಸೋರುವಿಕೆ ತಡೆಗಟ್ಟಲು ಕ್ರಮವಹಿಸಲಾಗುತ್ತದೆ. ಇದಲ್ಲದೆ ಕಲುಷಿತ ನೀರು ಸರಬರಾಜಾಗುತ್ತಿದ್ದಲ್ಲಿ ತಕ್ಷಣ ಕ್ರಮವಹಿಸಿ ಕಲುಷಿತ ನೀರು ಸರಬರಾಜು ಕೊಳವೆಗೆ ಸೇರದಂತೆ ಕೂಡಲೇ ಕಾರ್ಯ ಪ್ರವೃತ್ತರಾಗಿ ಕ್ರಮವಹಿಸಲಾಗುತ್ತದೆ. ಕಾಲರಾ ಮತ್ತು ಜಿ.ಇ. ಗೆ ಸಂಬಂಧಿಸಿದ ಮಾಹಿತಿಯನ್ನು ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಿಂದ ದಿನಾಂಕ 01.04.2020 ರಿಂದ 22.04.2020 ರವೆಗೆ ನೋಂದಣಿಯಾದ ಪ್ರಕರಣಗಳ ವಿಳಾಸವನ್ನು ಪಡೆದು  ಅಂತಹ ಸ್ಥಳಗಳಂದ ನೀರಿನ ಮಾದರಿಯನ್ನು ಸಂಗ್ರಹಿಸಲಾಗಿ, ಕ್ರೋಢೀಕರಿಸಿದ ಫಲಿತಾಂಶದ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.

ದಿನಾಂಕ 01.04.2020 ರಿಂದ 22.04.2020 ರವರೆಗೆ ದಾಖಲುಗೊಂಡ ಒಟ್ಟು 55 ನೀರಿನ ಮಾದರಿಯನ್ನು ಸಂಗ್ರಹಿಸಿದ್ದು, 2 ಮಾದರಿಗೆ ಸಂಬಂಧಿಸಿದ ಪ್ರದೇಶಗಳಲ್ಲಿ ನೀರು ಸರಬರಾಜು ಇಲ್ಲದಿದ್ದ ಕಾರಣ ನೀರಿನ ಮಾದರಿಯನ್ನು ಸಂಗ್ರಹಿಸಿರುವುದಿಲ್ಲ, 38 ಮಾದರಿಗೆ ಸಂಬಂಧಿಸಿದ ನೀರಿನ ಮಾದರಿಗಳನ್ನು ಸಂಗ್ರಹಿಸಲಾಗಿದ್ದು,  ಎಲ್ಲಾ 36 ಮಾದರಿಯ ಫಲಿತಾಂಶವು ಕುಡಿಯಲು ಯೋಗ್ಯವಾಗಿರುತ್ತದೆ. 01 ಪ್ರಕರಣದ ಫಲಿತಾಂಶವು ನಿರೀಕ್ಷಣೆಯಲ್ಲಿರುತ್ತದೆ. ಉಳಿದ 15 ಮಾದರಿಗಳಿಗೆ ಸಂಬಂಧಿಸಿದ ಪ್ರದೇಶಗಳು ಜಲ ಮಂಡಳಿಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ.

ನಗರದಲ್ಲಿ ಕೋವಿಡ್ –19 ಹರಡುತ್ತಿರುವ ಹಿನ್ನೆಲೆಯಲ್ಲಿ ಅಂತರ ಕಾಯ್ದುಕೊಳ್ಳಬೇಕಾಗಿರುವ ಕಾರಣ ಜಲಮಂಡಳಿಯ ಮಾಪನ ಓದುಗರು ಮನೆಮನೆಗೆ ತೆರಳಿ ನೀರಿನ ಬಿಲ್‌ಅನ್ನು ವಿತರಿಸಲು ಸಾಧ್ಯವಾಗದಿರುವುದರಿಂದ ನೀರಿನ ಬಿಲ್‌ನ ಮಾಹಿತಿಯನ್ನು ಜಲಮಂಡಳಿಯಲ್ಲಿ ಲಭ್ಯವಿರುವ ಗ್ರಾಹಕರ ಮೊಬೈಲ್ ನಂಬರ್‌ಗಳಿಗೆ ವಾಚನ ದಿನವಹಿ ಎಸ್.ಎಂ.ಎಸ್.ಮುಖಾಂತರ ಕಳುಹಿಸಲಾಗುತ್ತಿದ್ದು, ಎಸ್.ಎಂ.ಎಸ್.ನಲ್ಲಿರುವ ಲಿಂಕ್ ಮುಖಾಂತರ ನೀರಿನ ಬಿಲ್‌ಅನ್ನು ಪಾವತಿಸಬಹುದಾಗಿರುತ್ತದೆ.

ಗ್ರಾಹಕರು ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ವಾಟ್ಸ್‌ಆಪ್ ಸಂಖ್ಯೆ:8762228888 ಗೆ ತಮ್ಮ ಹೆಸರು, ಆರ್.ಆರ್. ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆ ಯನ್ನು ಕಳುಹಿಸಿ ನೋಂದಾಯಿಸಿಕೊಂಡಲ್ಲಿ ನೀರಿನ ಬಿಲ್ಲಿನ ವಿವರವನ್ನು ತಮ್ಮ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್ ಮೂಲಕ ಕಳುಹಿಸಲಾಗುವುದು.

ಇದಲ್ಲದೆ ಜಲಮಂಡಳಿಯ ಅಧಿಕೃತ ವೆಬ್‌ಸೈಟ್ : **www.bwssb.gov.in** ನಲ್ಲಿ ಎಲ್ಲಾ ಗ್ರಾಹಕರ ಬಿಲ್‌ಗಳನ್ನು ವಾಚನ ದಿನವಹಿ ಪ್ರಕಟಿಸಲಾಗುತ್ತಿದ್ದು, ನೀರಿನ ಬಿಲ್ ಪಾವತಿಯನ್ನು ಮಂಡಳಿಯ ವೆಬ್‌ಸೈಟ್ ಮುಖಾಂತರ ಮಾಡಬಹುದಾಗಿರುತ್ತದೆ ಹಾಗೂ ಮಂಡಳಿಯ ಆ್ಯಪ್ ಆಗಿರುವ **"BWSSB Payment App"** ಮುಖಾಂತರ **Quick Pay** ಮಾಡಬಹುದಾಗಿರುತ್ತದೆ. ಮಂಡಳಿಯ ವೆಬ್‌ಸೈಟ್‌ನಲ್ಲಿ **"BWSSB Payment App"** ನ ಲಿಂಕ್ ಲಭ್ಯವಿದ್ದು, **Google Play store** ನಲ್ಲಿಯೂ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಆನ್‌ಲೈನ್ ಪೇಮೆಂಟ್ ಸೇವೆಗಳಾದ **BBPS(Bharat Bill Payment System)**ನಿಂದ ಲಭ್ಯವಿರುವ **Paytm, Phone-Pe, Google Pay,** ಮುಖಾಂತರವಾಗಿಯೂ ನೀರಿನ ಬಿಲ್ ಪಾವತಿಯನ್ನು ಮಾಡಬಹುದಾಗಿರುತ್ತದೆ. ಗ್ರಾಹಕರು ಇದರ ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ಸಹಾಯವಾಣಿಯ ಸಂಖ್ಯೆ:22238888 ಹಾಗೂ 1916 ಮತ್ತು ವಾಟ್ಸ್‌ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ. ತಮ್ಮ ಸಮೀಪದ ಸೇವಾಠಾಣೆಯ ದೂರವಾಣಿ ಸಂಖ್ಯೆಯನ್ನು ಮಂಡಳಿಯ ಅಧಿಕೃತ ವೆಬ್‌ಸೈಟ್:**www.bwssb.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

## BWSSB Steps on Payment of water bills and preventing cholera

Bengaluru, April 24 (Karnataka Information)

BWSSB immediately take action to stop the leakage as soon as water leakages are detected and reported from public or from staff of BWSSB. Adding to this, if contamination of water is detected it is taken care that contaminated water does not get in contact to the water supply pipe lines. BWSSB collected address of the cases reported about Cholera and GE from Health & Family Welfare Department, Government Epidemic Disease Hospital, Bangalore, 01.04.2020 to 22.04.2020 tested the samples and results of the samples are stated below.

Among the 55 cases reported from 01.04.2020 to 22.04.2020, samples from 2 area was not collected since water supply for that area was not on the day when

the water sample were collected, samples from 38 areas were collected and result of **all 36 samples were obtained as suitable for potable purpose(SPP**). 1 sample result is awaited. The areas of remaining 15 cases does not comes under BWSSB limits.

**Since COVID-19 is spreading in the city rapidly, in the view of maintaining social distance, BWSSB's meter reader cannot issue the bill by taking meter reading from each house. Water bill details are being sent through SMS reading day wise for the mobile numbers of customers that are available in the Board and payment can be made by clicking on the link provided in the SMS.**

**All customers are requested to register the details by sending their name, R.R. Number and mobile number to 24/7 BWSSB call center whatsapp number :8762228888 and thus water bill details will be sent to their registered mobile number through SMS**

**Along with this, water bills of all consumers are being published reading day wise in BWSSB official website: www.bwssb.gov.in and payment can be made through the website. BWSSB's App called "BWSSB Payment App" is also available and Quick Pay can be made through this app. Customers can login to the app via the link provided in BWSSB official website and app can also be downloaded from Google pay store. Payment can also be made through online services of BBPS (Bharath Bill Payment System) like Paytm, Phone pe, Google pay etc.**

It is also informed that BWSSB Call center number 080-22238888 is available 24/7 to receive the complaint of customers. Along with this, whatsapp number:8762228888 and toll free number 1916 is also available. Service station address and contact details can be obtained through BWSSB official **web site :www.bwssb.gov.in.**

Contribution of BWSSB to aid the activities of State Government in

Fighting against CORONA Virus COVID-19

Bengaluru, April 24 (Karnataka Information)

CORONA Virus COVID-19 has been spreading enormously in the state and hence State Government has been providing essential basic facilities to the victims, to aid

these activities of State Government and also to fight against Corona virus BWSSB has contributed Rs.2.00 crores (Two Crores only) from its income.

As per the request of BWSSB employees association, Rs.40.00Lakhs has been collected by deducting one day salary from all Officer/Staff of BWSSB and contributed towards the fight against COVID-19.

Including contribution of BWSSB income Rs.2.00 Crores and contribution of Officer/Staff one day salary Rs.40.00 Lakhs, total of **Rs.2.40 Crores** has been contributed towards **"Chief Minister's Relief Fund"** on 24.04.2020.

B.A.Basavaraju, Urban Development Minister, Government of Karnataka, Rakesh Singh, I.A.S., Additional Chief Secretary, Urban Development Department, Tushar Giri Nath, I.A.S., Chairman of BWSSB, M.V. Prashanth Kumar, FA-CAO, B.Suresh, ACE(WWM) and Rudregowda President of BWSSB Employees association were present in this occasion.

## ನೀರಿನ ಬಿಲ್ ಪಾವತಿ ಹಾಗೂ ಕಾಲರಾ ತಡೆಗಟ್ಟುವ ನಿಟ್ಟಿನಲ್ಲಿ ಬೆಂಗಳೂರು ಜಲಮಂಡಳಿಯ ಕ್ರಮ

**ಬೆಂಗಳೂರು, ಏಪ್ರಿಲ್ 24 ( ಕರ್ನಾಟಕ ವಾರ್ತೆ ) :** ಬೆಂಗಳೂರು ಜಲಮಂಡಳಿಯು ನೀರು ಸರಬರಾಜು ಕೊಳವೆಯಲ್ಲಿ ಸೋರುವಿಕೆಯನ್ನು ಸಾರ್ವಜನಿಕರಿಂದ ಅಥವಾ ಮಂಡಳಿಯ ಸಿಬ್ಬಂದಿಯವರು ಗುರುತಿಸಿದ ತಕ್ಷಣ ಸೋರುವಿಕೆ ತಡೆಗಟ್ಟಲು ಕ್ರಮವಹಿಸಲಾಗುತ್ತದೆ. ಇದಲ್ಲದೆ ಕಲುಷಿತ ನೀರು ಸರಬರಾಜಾಗುತ್ತಿದ್ದಲ್ಲಿ ತಕ್ಷಣ ಕ್ರಮವಹಿಸಿ ಕಲುಷಿತ ನೀರು ಸರಬರಾಜು ಕೊಳವೆಗೆ ಸೇರದಂತೆ ಕೂಡಲೇ ಕಾರ್ಯ ಪ್ರವೃತ್ತರಾಗಿ ಕ್ರಮವಹಿಸಲಾಗುತ್ತದೆ. **ಕಾಲರಾ ಮತ್ತು ಜಿ.ಇ**. ಗೆ ಸಂಬಂಧಿಸಿದ ಮಾಹಿತಿಯನ್ನು ಸಾಂಕ್ರಾಮಿಕ ರೋಗಗಳ ಆಸ್ಪತ್ರೆಯಿಂದ ದಿನಾಂಕ 01.04.2020 ರಿಂದ 22.04.2020 ರವೆಗೆ ನೋಂದಣಿಯಾದ ಪ್ರಕರಣಗಳ ವಿಳಾಸವನ್ನು ಪಡೆದು ಅಂತಹ ಸ್ಥಳಗಳಿಂದ ನೀರಿನ ಮಾದರಿಯನ್ನು ಸಂಗ್ರಹಿಸಲಾಗಿ, ಕ್ರೋಢೀಕರಿಸಿದ ಫಲಿತಾಂಶದ ಸಂಪೂರ್ಣ ವಿವರವನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿರುವುದು. ಫಲಿತಾಂಶದ ಸಂಕ್ಷಿಪ್ತ ವಿವರ ಈ ಕೆಳಕಂಡಂತಿದೆ.

ದಿನಾಂಕ 01.04.2020 ರಿಂದ 22.04.2020 ರವರೆಗೆ ದಾಖಲುಗೊಂಡ ಒಟ್ಟು 55 ನೀರಿನ ಮಾದರಿಯನ್ನು ಸಂಗ್ರಹಿಸಿದ್ದು, 40 ಮಾದರಿಗೆ ಸಂಬಂಧಿಸಿದ ನೀರಿನ ಮಾದರಿಗಳನ್ನು ಸಂಗ್ರಹಿಸಲಾಗಿದ್ದು, **ಎಲ್ಲಾ 38 ಮಾದರಿಯ ಫಲಿತಾಂಶವು ಕುಡಿಯಲು ಯೋಗ್ಯವಾಗಿರುತ್ತದೆ**. 02 ಪ್ರಕರಣದ ಫಲಿತಾಂಶವು

ನಿರೀಕ್ಷಣೆಯಲ್ಲಿರುತ್ತದೆ. ಉಳಿದ 15 ಮಾದರಿಗಳಿಗೆ ಸಂಬಂಧಿಸಿದ ಪ್ರದೇಶಗಳು ಜಲ ಮಂಡಳಿಯ ವ್ಯಾಪ್ತಿಗೆ ಒಳಪಟ್ಟಿರುವುದಿಲ್ಲ.

ನಗರದಲ್ಲಿ ಕೋವಿಡ್ –19 ಹರಡುತ್ತಿರುವ ಹಿನ್ನೆಲೆಯಲ್ಲಿ ಅಂತರ ಕಾಯ್ದುಕೊಳ್ಳಬೇಕಾಗಿರುವ ಕಾರಣ ಜಲಮಂಡಳಿಯ ಮಾಪನ ಓದುಗರು ಮನೆಮನೆಗೆ ತೆರಳಿ ನೀರಿನ ಬಿಲ್‌ಅನ್ನು ವಿತರಿಸಲು ಸಾಧ್ಯವಾಗದಿರುವುದರಿಂದ ನೀರಿನ ಬಿಲ್‌ನ ಮಾಹಿತಿಯನ್ನು ಜಲಮಂಡಳಿಯಲ್ಲಿ ಲಭ್ಯವಿರುವ ಗ್ರಾಹಕರ ಮೊಬೈಲ್ ನಂಬರ್‌ಗಳಿಗೆ ವಾಚನ ದಿನವಹಿ ಎಸ್.ಎಂ.ಎಸ್.ಮುಖಾಂತರ ಕಳುಹಿಸಲಾಗುತ್ತಿದ್ದು, ಎಸ್.ಎಂ.ಎಸ್.ನಲ್ಲಿರುವ ಲಿಂಕ್ ಮುಖಾಂತರ ನೀರಿನ ಬಿಲ್‌ಅನ್ನು ಪಾವತಿಸಬಹುದಾಗಿರುತ್ತದೆ.

ಗ್ರಾಹಕರು ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ವಾಟ್ಸ್‌ಆಪ್ ಸಂಖ್ಯೆ:8762228888 ಗೆ ತಮ್ಮ ಹೆಸರು, ಆರ್.ಆರ್. ಸಂಖ್ಯೆ ಮತ್ತು ಮೊಬೈಲ್ ಸಂಖ್ಯೆ ಯನ್ನು ಕಳುಹಿಸಿ ನೋಂದಾಯಿಸಿಕೊಂಡಲ್ಲಿ ನೀರಿನ ಬಿಲ್ಲಿನ ವಿವರವನ್ನು ತಮ್ಮ ಮೊಬೈಲ್ ಸಂಖ್ಯೆಗೆ ಎಸ್.ಎಂ.ಎಸ್ ಮೂಲಕ ಕಳುಹಿಸಲಾಗುವುದು.

ಇದಲ್ಲದೆ ಜಲಮಂಡಳಿಯ ಅಧಿಕೃತ ವೆಬ್‌ಸೈಟ್ : www.bwssb.gov.in ನಲ್ಲಿ ಎಲ್ಲಾ ಗ್ರಾಹಕರ ಬಿಲ್‌ಗಳನ್ನು ವಾಚನ ದಿನವಹಿ ಪ್ರಕಟಿಸಲಾಗುತ್ತಿದ್ದು, ನೀರಿನ ಬಿಲ್ ಪಾವತಿಯನ್ನು ಮಂಡಳಿಯ ವೆಬ್‌ಸೈಟ್ ಮುಖಾಂತರ ಮಾಡಬಹುದಾಗಿರುತ್ತದೆ ಹಾಗೂ ಮಂಡಳಿಯ ಆ್ಯಪ್ ಆಗಿರುವ "BWSSB Payment App" ಮುಖಾಂತರ Quick Pay ಮಾಡಬಹುದಾಗಿರುತ್ತದೆ. ಮಂಡಳಿಯ ವೆಬ್‌ಸೈಟ್‌ನಲ್ಲಿ "BWSSB Payment App" ನ ಲಿಂಕ್ ಲಭ್ಯವಿದ್ದು, Google Play store ನಲ್ಲಿಯೂ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಆನ್‌ಲೈನ್ ಪೇಮೆಂಟ್ ಸೇವೆಗಳಾದ BBPS(Bharat Bill Payment System)ನಿಂದ ಲಭ್ಯವಿರುವ Paytm, Phone-Pe, Google Pay, ಮುಖಾಂತರವಾಗಿಯೂ ನೀರಿನ ಬಿಲ್ ಪಾವತಿಯನ್ನು ಮಾಡಬಹುದಾಗಿರುತ್ತದೆ. ಗ್ರಾಹಕರು ಇದರ ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ.

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ಸಹಾಯವಾಣಿಯ ಸಂಖ್ಯೆ:22238888 ಹಾಗೂ 1916 ಮತ್ತು ವಾಟ್ಸ್‌ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ. ತಮ್ಮ ಸಮೀಪದ ಸೇವಾಠಾಣೆಯ ದೂರವಾಣಿ ಸಂಖ್ಯೆಯನ್ನು ಮಂಡಳಿಯ ಅಧಿಕೃತ ವೆಬ್‌ಸೈಟ್:www.bwssb.gov.in ನಲ್ಲಿ ಪಡೆಯಬಹುದಾಗಿರುತ್ತದೆ.

# Payment of water bills and steps taken to prevent cholera

BWSSB immediately take action to stop the leakage as soon as water leakages are detected and reported from public or from staff of BWSSB. Adding to this, if contamination of water is detected it is taken care that contaminated water

does not get in contact to the water supply pipe lines. BWSSB collected address of the cases reported about Cholera and GE from Health & Family Welfare Department, Government Epidemic Disease Hospital, Bangalore, 01.04.2020 to 22.04.2020 tested the samples and results of the samples are enclosed with this letter. The abstract of the result is as mentioned below.

Among the 55 cases reported from 01.04.2020 to 22.04.2020, samples from 40 areas were collected and result of **all 38 samples were obtained as suitable for potable purpose(SPP)**. 02 sample result is awaited. The areas of remaining 15 cases does not comes under BWSSB limits.

**Since COVID-19 is spreading in the city rapidly, in the view of maintaining social distance, BWSSB's meter reader cannot issue the bill by taking meter reading from each house. Water bill details are being sent through SMS reading day wise for the mobile numbers of customers that are available in the Board and payment can be made by clicking on the link provided in the SMS.**

**All customers are requested to register the details by sending their name, R.R. Number and mobile number to 24/7 BWSSB call center whatsapp number :8762228888 and thus water bill details will be sent to their registered mobile number through SMS**

**Along with this, water bills of all consumers are being published reading day wise in BWSSB official website: www.bwssb.gov.in and payment can be made through the website. BWSSB's App called "BWSSB Payment App" is also available and Quick Pay can be made through this app. Customers can login to the app via the link provided in BWSSB official website and app can also be downloaded from Google pay store. Payment can also be made through online services of BBPS (Bharath Bill Payment System) like Paytm, Phone pe, Google pay etc.**

It is also informed that BWSSB Call center number 080-22238888 is available 24/7 to receive the complaint of customers. Along with this, whatsapp number:8762228888 and toll free number 1916 is also available. Service station address and contact details can be obtained through BWSSB official **web site :www.bwssb.gov.in .**